CW.9 PW.3

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.188/2025

| | |
|---|---|
| ಸಾಕ್ಷಿದಾರರ ಹೆಸರು | ಡಾ.ಮಹೇಶ್ |
| ತಂದೆಯ ಹೆಸರು | ಲೇಟ್ ಪಿ. ಕೆಂಪಯ್ಯ |
| ವಯಸ್ಸು | 54 ವರ್ಷ |
| ವೃತ್ತಿ | ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ ಅಚ್ಚಲು |
| ವಿಳಾಸ | ಅಚ್ಚಲು |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 05.03.2026 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ನಾನು 01.12.2013 ರಿಂದ 06.10.2015 ರವರೆಗೆ ನಾನು ಕನಕಪುರ ಸರ್ಕಾರಿ ಆಸ್ಪತ್ರೆಯಲ್ಲಿ ನನ್ನ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕ 24.08.2014 ರಂದು ರಾತ್ರಿ ಸುಮಾರು 9.00 ಗಂಟೆ ಸಮಯದಲ್ಲಿ ಚಾಸಾ-1 ರವರು ನಮ್ಮ ಆಸ್ಪತ್ರೆಗೆ ಭೇಟಿ ಮಾಡಿದ್ದು ಅವರಿಗೆ ಯಾರೋ 05 ಜನ ಪರಿಚಯದವರು ಚಾಕುವಿನಿಂದ ರಾತ್ರಿ 7 ಗಂಟೆ ಸಮಯದಲ್ಲಿ ಹಲ್ಲೆ ಮಾಡಿರುವುದಾಗಿ ನಮಗೆ ತಿಳಿಸಿ ಚಿಕಿತ್ಸೆಗಾಗಿ ಬಂದಿದ್ದರು. ಸದರಿಯವರನ್ನು ಪರೀಕ್ಷೆ ಮಾಡಲಾಗಿ ಅವರಿಗೆ ಬಲತೋಳಿನಲ್ಲಿ ರಕ್ತಸಿಕ್ತ ಗಾಯ ಕಂಡು ಬಂದಿರುತ್ತದೆ. ಅದು 3x1 ಸೆಂಟಿ ಮೀಟರ್ ಇರುತ್ತದೆ. ಎಡತೋಳಿನ ಮೇಲೆ ರಕ್ತಸಿಕ್ಕ ಗಾಯವಾಗಿದ್ದು ಅದು 4x1ಸೆಂಟಿ ಮೀಟರ್ ಇರುತ್ತದೆ ಹಾಗೂ ಎದೆಯ ಮೇಲ್ಭಾಗದಲ್ಲಿ ರಕ್ತ ಹೆಪ್ಪುಗಟ್ಟಿರುವ ಬಗ್ಗೆ ಕಂಡು

ಬಂದಿರುತ್ತದೆ. ಸದರಿ ಗಾಯಗಳು ಸಾಮಾನ್ಯ ಸ್ವರೂಪದಾಗಿರುವುದಾಗಿ ನಾನು ನನ್ನ ಅಭಿಪ್ರಾಯವನ್ನು ದಿಃ10.09.2014 ರಂದು ನಾನು ಪೋಲೀಸರಿಗೆ ಕೊಟ್ಟಿರುತ್ತೇನೆ.

ಸಾಕ್ಷಿಗೆ ಸದರಿ ಪ್ರಕರಣದ ಗಾಯದ ಪ್ರಮಾಣ ಪತ್ರವನ್ನು ತೋರಿಸಲಾಗಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಚಾಸಾ-1 ರವರಿಗೆ ಆಗಿರುವಂತಹ ಗಾಯಗಳು ಈಗ ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವ 2 ಮರದ ಹಿಡಿಕೆ ಇರುವ ಚಾಕುಗಳನ್ನು ತೋರಿಸಲಾಗಿ ಅವುಗಳಿಂದ ಸದರಿ ಗಾಯಗಳು ಆಗಬಹುದಾ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದ**

ಚಾಸಾ-1 ರವರ ಜೊತೆಗೆ ನಿರಂಜನ್ ಸ್ವಾಮಿ (ಚಾಸಾ-8) ಎನ್ನುವವರು ಬಂದಿದ್ದರು. ಚಾಸಾ-1 ರವರು ಆಸ್ಪತ್ರೆಗೆ ಬಂದಾಗ ಯಾವ ವಸ್ತುಗಳಿಂದ ಅವರಿಗೆ ಹಲ್ಲೆಯಾಗಿರುತ್ತದೆಂದು ತೋರಿಸಲು ಸದರಿ ವಸ್ತುಗಳನ್ನು ತಂದಿರುವುದಿಲ್ಲ ಎಂದರೆ ಸರಿ. ಸದರಿ ಯವರು ಪೋಲೀಸರ ಮುಖಾಂತರ ಬಂದಿರುವುದಿಲ್ಲ ಎಂದರೆ ಸರಿ. ಚಾಸಾ-1 ರವರಿಗೆ ಹಲ್ಲೆ ಹಿನ್ನಲೆಯಲ್ಲಿ ಬಂದಿರುವುದಾಗಿ ನಾನು ಪೋಲೀಸರಿಗೆ ಯಾವುದೇ ಮಾಹಿತಿ ಕೊಟ್ಟಿರುವುದಿಲ್ಲ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ರೈತರು ಕುಡುಗೋಲುಗಳನ್ನು ಹಾಗೂ ಸಲಕರಣೆಗಳನ್ನು ಉಪಯೋಗಿಸುತ್ತಾರೆ ಆಗ ಅದು ಕೈ ಜಾರಿ ಬಿದ್ದರೆ ಅಥವಾ ಇವರೆ ಅವುಗಳ ಬಿದ್ದರೆ ಈ ತರಹದ ಗಾಯಗಳು ಆಗಬಹುದು ಎಂದರೆ ಸರಿ.

**ಮರುವಿಚಾರಣೆಃ ಇರುವುದಿಲ್ಲ** **ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**